ಇವ್ರು ಅಂತಾ ಎಲ್ಲಾ ಮಾತಾಡಿದ್ದೀಯ. ನಿನ್ನ ಅಂಗೆ ಕಳುಸುದ್ರೆ ಎಂಗೆ?'

ಸಿದ್ದಪ್ಪ ಮತ್ತೆ ಮಾಯಣ್ಣನ ಕಡೆ ತಿರುಗಿ ನಿಂತ. ಈ ಮಾನಗೇಡಿಯ ಮುಸುಡಿ ನೋಡುತ್ತಿದ್ದಂತೆ ಮಾಯಣ್ಣನ ತಾಳ್ಮೆ ತಳ ತಾಕಿ, ಆವೇಶದಿಂದ ಬೀಸಿ ಬೀಸಿ ಕಪಾಳಕ್ಕೆ ಬಾರಿಸಿದ. ಮೂರ್ನಾಲ್ಕು ಏಟಿಗೆ ಬವಳಿ ಬಂದಂತೆ ಜೋಲಿ ಹೊಡೆದು ಕೆಳಗೆ ಕುಸಿದಿದ್ದ ಸಿದ್ದಪ್ಪ. ಹೇಗೊ ಸಾವರಿಸಿಕೊಂಡು ಮೇಲೆದ್ದ ಸಿದ್ದಪ್ಪನಿಗೆ ಮಾಯಣ್ಣ–

'ಡೋಂಟ್ ವರಿ ಸಿದ್ದಪ್ಪ, ಈಗ ಈ ರೆಕಾರ್ಡ್ ರೂಮಲ್ಲಿ ನಡೆದದ್ದೆಲ್ಲಾ ಆಫ್ ದಿ ರೆಕಾರ್ಡ್' ಎನ್ನುತ್ತಾ ಇನ್ನಷ್ಟು ಉರಿಸಿದ. ಸಿದ್ದಪ್ಪ ಸೋತ ಹೆಜ್ಜೆ ಹಾಕುತ್ತಾ ಚಿಲಕ ತೆಗೆದು ಹೊರನಡೆದಿದ್ದ. ಆಗ ಅಲ್ಲಿಗೆ ಬಂದ ಎಸ್ಪಿ ಸಾಹೇಬ, 'ಸಾರ್ ನಿಮಗೆ ಬೇಕಾಗಿದ್ದೆಲ್ಲ ಸಿಕ್ಕಿದೆ ಅಂತ ತಿಳೀತೀನಿ' ಎನ್ನಲು, ಸಿದ್ದಪ್ಪ ಮುಖ ಹುಳ್ಳಗೆ ಮಾಡಿಕೊಂಡು ಸುಮ್ಮನೆ ತಲೆಯಾಡಿಸಿ ಮುಂದೆ ಸಾಗಿದ್ದ.

ಅಹಂಕಾರದ, ಅಧಿಕಾರದ ಅಂಬಾರಿ ಏರಿ ಬಂದಿದ್ದ ಸಿದ್ದಪ್ಪ ಮಕಾಡೆ ಬಿದ್ದು ಮಣ್ಣು ಮುಕ್ಕಿ, ತನ್ನ ಪರೋಡಿ ಪರಿವಾರದೊಂದಿಗೆ ಹೊರ ಬಿದ್ದಿದ್ದ. ಮುಂದಿನ ಎರಡು ವಾರಗಳಲ್ಲಿ ನಿಧಾನವಾಗಿ ಹೊರಗೆ ಸೋರಿದ್ದ ಈ ಘಟನೆಯ ಸುದ್ದಿ ವಿವರಗಳು ಮಾಯಣ್ಣನ ಅಸಲಿಯತ್ತನ್ನು ಅನುಮಾನವಿಲ್ಲದಂತೆ, ನಿಚ್ಚಳವಾಗಿ ಸಾಬೀತುಮಾಡಿದ್ದವು – ಸ್ಟೇಷನ್ನಿನ ಒಳಗಷ್ಟೇ ಅಲ್ಲ, ಹೊರಗೂ ಕೂಡ.

ಭುಜಂಗ ಟೇಬಲ್ಮೇಲೆ ತಂದಿಟ್ಟಿದ್ದ ಬೆಳಗಿನ ಕಾಫಿ ತಣ್ಣಗಾಗುತಿತ್ತು. ನೈಟ್ ಬೀಟ್ ಪೇದೆಗಳ ಮತ್ತು ಡ್ಯೂಟಿ ಪೇದೆಗಳ ಹಾಜರಾತಿ, ರಿಪೋರ್ಟ್, ಸ್ಟೇಷನ್ ಡೈರಿ ಮತ್ತು ರಿಜಿಸ್ಟರ್‌ಗಳ ಎಂಟ್ರಿ, ಕೋರ್ಟ್ ಡ್ಯೂಟಿ ನಿಯೋಜನೆ, ಇತ್ಯಾದಿ ಸ್ಟೇಷನ್ನಿನ ನಿತ್ಯಕರ್ಮಗಳನ್ನೆಲ್ಲಾ ಮುಗಿಸಿ, ಸ್ಟೇಷನ್ ತಾರಸಿ ಮೇಲೆ ಎರಡು ನಿಮಿಷ ಏಕಾಂತದಲ್ಲಿ ಕಾಫಿ ಕುಡಿಯುತ್ತಾ ಅಡ್ಡಾಡುವುದು ಮಾಯಣ್ಣನ ರೂಢಿ. ಬಹುತೇಕ ಅದೇ ಸಮಯದಲ್ಲೇ, ಚೊಚ್ಚಲ ಬಾಣಂತನಕ್ಕೆ ತವರು ಮನೆಗೆ ಹೋಗಿದ್ದ ಮಾಯಣ್ಣನ ಹೆಂಡತಿ ಸೌಜನ್ಯ ಫೋನ್ ಮಾಡೋದು. ಎಣಿಸಿದಂತೇ ರಿಂಗಣಿಸಿತ್ತು ಮಾಯಣ್ಣನ ಮೊಬೈಲ್ ಫೋನು.

'ರೀ ನನ್ನ ಕೈಯಲ್ಲಾಗಲ್ಲ, ಕರ್ಕೊಂಡೋಗಿ, ಅಲ್ಲೇ ಸ್ಟೇಷನ್ ಒಳಗೊಂದು ತೊಟ್ಲು ಕಟ್ಕೊಂಡು ನೋಡ್ಕೊಳಿ ನಿಮ್ಮಗನ್ನ'.

'ಅಲ್ವೇ, ಆ ಎಂಟು ತಿಂಗಳ ಮಗು ಮೇಲೂ ಕಂಪ್ಲೇಂಟಾ...?'

'ಇನ್ನೇನು, ಮೊದ್ಲು ಏನ್ ಮಾಡೌನೆ ಕೇಳಿ'.

'ಹೇಳು...'

'ಆ ನಿಮ್ ತಂಗಿ ಅವ್ಳಲ್ಲಾ, ಸುಪನಾತಿ...'

'ಯಾರು ಸುಮಿತ್ರಾನ...'

'ಅವಳೇನೆ, ಮಗಿನ್ನೋಡ ನೃಪ ಮಾಡ್ಕೊಂಡ್ ಬಂದಿದ್ಲು...'

'ಅದಕ್ಕೇನು ಇವಾಗ'.

'ತೊಟ್ಲಾಗ್ ಮಲ್ಗಿರೊ ಮಗಿನತ್ರ ಅವ್ಳ್ ಓತಿಕ್ಯಾತನ್ ಮೂತಿ ತಗೊಂಡೋಗಿ 'ಚೂಚು ಪೂಚು' ಅನ್ಕೊಂಡ್ ಡೊವ್ ಮಾಡೋಕೋಗವ್ಳೆ. ಪಾಪ ಆ ಕಂದಮ್ಮ ಕಣ್ಬಿಟ್ಟು ಗಾಬ್ರಿ ಆಗಿ, ನೇರ ಅವ್ಳ್ ಬಾಯ್ಗೇ ಉಚ್ಚೆ ಫೌಂಟೇನ್ ಬಿಟ್ಟವ್ನೆ'.

'ಇವಾಗ ನಿನಗೆ ಅದಕ್ಕೆ ದುಃಖ ಆಗ್ತೈತೆ ಅನ್ನು. ಯಾಕೇ ಅವುಳುನ್ ನೋಡಿ ಅಷ್ಟೊಂದ್ ಉರ್ಕೊಂತೀಯಾ?'

'ಇನ್ನೇನು, ನಿಮ್ಮಮ್ಮ ತೀರ್ಕೊಂಡ್ ಇನ್ನಾ ಮೂರ್ದಿನನೂ ಆಗಿರ್ಲಿಲ್ಲ, ಮಾತಾಯಿ ಬಂದವ್ಳು ಬೆಳ್ಳಿ ಸಾಮಾನಿಂದ ಇಡ್ದು ಬಚ್ಚಲ್ಮನೆ ಬಕೀಟ್ ತನಕ ಎಲ್ಲಾ ಬಾಚ್ಕೊಂಡು ಟೆಂಪೊ ವ್ಯಾನ್‌ಗೆ ತುಂಬ್ಕೊಂಡೋಗ್ಬುಟ್ಲು. ಮನೆ ಮಗ್ಳೂ ಅಂದ್ರೆ ಇದ್ದೇನಾ?'

'ಅದೋಗ್ಲಿ, ಬಾಣಂತನಕ್ಕೋಗಿ ಎಂಟು ತಿಂಗಳಾದ್ರು ಅಲ್ಲೇ ಕುಂತಿದ್ದೀಯಲ್ಲಾ, ನಿಮ್ಮಣ್ಣ ಅತ್ಗಿಗೆ ಏನನ್ನಲ್ಲಾ? ನನಗೂ ನನ್ನ ಮಗನ ಜೊತೆ ಆಟ ಆಡ್ಬೇಕು ಅನ್ನಲ್ವಾ?'

'ನಿಮಗೆಷ್ಟ್ ಸಾರಿ ಹೇಳದು, ನಾನು ನನ್ಮಗ ಆ ಕ್ವಾಟ್ರಸ್ ಮನೆಗೆ ಬರಲ್ಲ. ನಮ್ಮಪ್ಪ ನಂಗ್ ಬರ್ದಿವ್ರಲ್ಲಾ ಸೈಟು, ಅಲ್ಲಿ ಮನೆ ಕಟ್ಟಿ, ನಾವು ಬತ್ತೀವಿ'.

'ಅಷ್ಟೊಂದು ದುಡ್ಡು ಎಲ್ಲಿಂದ ತರೋದು?'

'ನಮ್ಮಪ್ಪ ಅದೇ ಸ್ಟೇಷನ್ನಾಗೆ ಹೆಡ್ ಕಾನ್ಸ್‌ಟೇಬಲ್ ಆಗಿದ್ದಿದ್ದು. ನಾಕ್ ಮಕ್ಕಳ್ಗೂ ನಾಕ್ ಸೈಟ್ ಮಾಡಿ ತೀರ್ಕೊಂಡ್ರು. ತಿರ್ಗ ನಿಮ್ಮಂಗೆ ಎಸ್ ಐ ಏನಲ್ಲಾ'.

'ನಿಮ್ಮಪ್ಪ ಬಿಡು...'

'ಆ ಕದರ್ರೂ ಕೆಪಾಸಿಟಿ ನಿಮಗೆಲ್ ಬರಬೇಕೇಳಿ. ನಮ್ಮಪ್ಪ ಮಾರ್ಕೆಟ್ಗೆ ಕಾಲಿಡ್ತಾ ಇದ್ದಂಗೆ ಎಲ್ಲಾ ತರ ತರ್ಕಾರಿನ, ಅವುರ್ಗುಳೇ ಬ್ಯಾಗ್ ತುಂಬ್ಸಿ ಕಳುಸ್ಬುಡೊವ್ರು... ನೀವೂ ಇದ್ದೀರಾ... ವೋಗಿ ಮಾರ್ಕೆಟ್ಗೆ ನೋಡೋನ, ನಿಮ್ಮುಟ್ಗೆ ಒಂದ್ ಕಟ್ಟು ಕೊತ್ತಂಬರಿ ಸೊಪ್ಪೂ ಉಟ್ಟಲ್ಲ...'

'ಅದಿರಲಿ, ಮನೆಗೆ ಯಾವಾಗ ಬರ್ತೀಯ ಹೇಳು'.

'ಫಸ್ಟು ಯಾರಾದ್ರೂ ಕಂಟ್ರಾಕ್ಟರ್‌ನ ಇಡ್ದು ಮಾತಾಡಿ, ಗುದ್ಲೀ ಪೂಜೆ ಮಾಡ್ಲೀ ಆಮೇಲೆ ನೋಡಾನ'.

'ಅಂಗಾದ್ರೆ ಮುಂದಿನ ವರ್ಷಾನೇ?'

'ಕೈಯಲ್ಲಿ ಮೂರು ಮೊಳ ಹೂವ ಹಿಡ್ಕೊಂಡು ವಾರದ ಕೊನೆಗೆ ವಾಲಡ್ಕೊಂಡು ಬಂದ್ಬಿಡ್ತೀರಲ್ಲಾ, ಬನ್ನಿ ಈ ಸರಿ, ಒಣೀಲಿ ಚಾಪೆ ಆಕಿ ಮಲ್ಗುಸ್ತೀನಿ'.

'ಅಂಗೇ ಮಾಡಿಯಂತೆ ಫೋನಿಕ್ಕು, ಕೆಲಸ ಇದೆ'.

ತಾರಸಿಯಿಂದ ಕೆಳಗಿಳಿದು ಸೀಟಿಗೆ ಬರುತ್ತಿದ್ದಂತೆ ಮಾಯಣ್ಣನ ಫೋನ್ ರಿಂಗ್ ಆಯಿತು.

'ಸಾರ್, ನಾನು ವಿನಯ್, ಇಲ್ಲಿ ಚೇತನಾ ಲೇಔಟ್‌ನ ಒಂದು ಮನೆಯಲ್ಲಿ ಮರ್ಡರ್ ಆಗಿದೆ'.

'ನಾನು ಹೇಳೋದು ಗಮನ ಇಟ್ಟು ಕೇಳುಸ್ಕೊಳಿ. ಫಸ್ಟ್ ಸರಿಯಾಗಿ ನೋಡಿ. ಇನ್ನಾ ಜೀವ ಇದೆಯಾ ಅಂತ. ಇದ್ರೆ ಅಂಬುಲೆನ್ಸ್ ತಂದು ಆಸ್ಪತ್ರೆಗೆ ಸಾಗಿಸ್ಬೇಕಾ, ಏನು ನೋಡಿ. ಕ್ರೈಮ್ ಸ್ಪಾಟಲ್ಲಿ ಜಾಸ್ತಿ ಓಡಾಡ್ಬೇಡಿ, ಏನೂ ಮುಟ್ಬೇಡಿ. ಕ್ರಿಮಿನಲ್ ಅಲ್ಲೇ ಒಳಗೋ, ಹೊರಗೋ, ಸುತ್ತಾಮುತ್ತಾ ಇದ್ದೋ, ಏನು ಮೂವ್‌ಮೆಂಟ್ಸ್ ಇದ್ರು ಸೂಕ್ಷ್ಮವಾಗಿ ಗಮನಿಸಿ. ಯಾರು ನಿಮಗೆ ಮೊದಲು ಸುದ್ದಿ ಕೊಟ್ರೋ ಅವರನ್ನು ಅಲ್ಲೇ ಇರುಸ್ಕೊಳ್ಳಿ. ನಿಮ್ಮ ಜೊತೆ ಆ ಕುಂಬಯ್ಯ ಇರಬೇಕಲ್ವಾ, ಅವರಿಗೆ ಕ್ರೈಮ್ ಏರಿಯಾನ ಸುತ್ತೂ ಒಂದು ನೂರಡಿ ಕವರ್ ಮಾಡಿ ಯಾರೂ ಬರ್ದಂಗೆ, ಹೋಗ್ದಂಗೆ, ಡಿಸ್ಟರ್ಬ್ ಆಗ್ದಂಗೆ ಸೀಲ್ ಮಾಡೋದುಕ್ಕೆ ಹೇಳಿ. ಸಾಕ್ಷಿ–ಪುರಾವೆ ಏನೂ ಕರಪ್ಟ್ ಆಗಬಾರದು. ನಿಮ್ಮ ಮೊಬೈಲ್ ವಿಡಿಯೊ ಆನ್ ಮಾಡಿ ಹಾಗೆ ಎಲ್ಲಾ ರೆಕಾರ್ಡ್ ಮಾಡ್ತಾನೇ ಇರಿ. ನಾನು ಕಂಟ್ರೋಲ್ ರೂಮ್‌ಗೆ ಇನ್ಫರ್ಮೇಷನ್ ಕೊಟ್ಟು, ಮೇಲಧಿಕಾರಿಗಳ ಜೊತೆ ಮಾತಾಡಿ, ತಕ್ಷಣ ಸ್ಪಾಟ್‌ಗೆ ಬರ್ತೀನಿ'.

ಹೀಗೆ ಸೂಚನೆಗಳ ಸುರಿಮಳೆಯನ್ನೇ ಸುರಿಸುತ್ತಾ ಮಾಯಣ್ಣ ತನ್ನ ಬಲಗೈ ಬಂಟ ಭುಜಂಗನ ಕೂಡಿ ಜೀಪ್ ಏರಿದ.

## ಕಟ್ಟಡಗಳಿಂದ ಅಕ್ಷರ ಸೌಧಕ್ಕೆ...



ಬೆಂಗಳೂರಿನ ಮೋಹನ್ ಪ್ರಸಾದ್ ಸಿವಿಲ್ ಎಂಜಿನಿಯರಿಂಗ್ ಪದವೀಧರರು. ಕಟ್ಟಡಗಳ ತಳಪಾಯ ತಜ್ಞನಾಗಿ ಹೆಸರು ಮಾಡಿರುವ ಅವರು, ಬೋಧಕರಾಗಿ, ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಬೆಂಗಳೂರಿನ 'ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ'ಯ ಆಡಳಿತ ಮಂಡಳಿ ಸದಸ್ಯರು. ಮೋಹನ್ ಪ್ರಸಾದ್‌ರ ಆಸಕ್ತಿಯ ಮತ್ತೊಂದು ಕ್ಷೇತ್ರ ಸಾಹಿತ್ಯ. ಒಳ್ಳೆಯ ಓದುಗರಾದ ಅವರು, 'ಆಪರೇಷನ್ ಅಮ್ಮು' ಮೂಲಕ ಕಾದಂಬರಿ ಪ್ರಯೋಗಕ್ಕೆ ತಮ್ಮನ್ನೊಡ್ಡಿಕೊಂಡಿದ್ದಾರೆ ಹಾಗೂ 'ಸುಧಾ' ಬರಹಗಾರರ ಬಳಗಕ್ಕೆ ಸೇರ್ಪಡೆಯಾಗಿದ್ದಾರೆ. ಕಟ್ಟಡಗಳ ರೂಪುರೇಷೆಯ ಅವರ ಕಸುಬುದಾರಿಕೆ ಮತ್ತು ಅಚ್ಚುಕಟ್ಟುತನ ಸಾಹಿತ್ಯ ಶಿಲ್ಪದಲ್ಲೂ ಒಡಮೂಡಿರುವುದನ್ನು ಓದುಗರು ಗಮನಿಸಬಹುದು.